‘ಸೀತಾಪುರಕ್ಕೆ ಹೇಗೆ ಹೋಗುವುದು?’ ಅಲ್ಲೇ ಹೊರಗೆ ಕೆಲಸ ಮಾಡುತ್ತಿದ್ದ ಗಂಡಸನ್ನು ಕೇಳಿದ.

ಪೊರ್ಬುಗಳು ತಿರುಗಿ ನೋಡಿದರು. ‘ಸೀತಾಪುರವ? ಇದೇ ಗುಡ್ಡೆ ದಾಟಿದರೆ ಆಯ್ತು’ ಎನ್ನುತ್ತಾ, ‘ನಾನು ಶೆಟ್ರಿಗೆ ಕೆಲವು ಸಲ ಹೇಳಿದೆ. ಊರಿಗೆ ಇಲ್ಲೊಂದು ದಾರಿ ಮಾಡಿ ಅಂತ. ಅವರು ಮಾಡಲೇ ಇಲ್ಲ. ಹೊಸಬರಿಗೆ ಬಾರೀ ಕಷ್ಟ. ಅಂದ ಹಾಗೆ ಸೀತಾಪುರದಲ್ಲಿ ಯಾರಲ್ಲಿಗೆ ಹೋಗ್ಬೇಕಿತ್ತು?’ ಅಂತ ಸಂಜಯನನ್ನು ಅವರು ಪ್ರಶ್ನಿಸಿದರು.

ಸಂಜಯ್ ‘ಶಾಸ್ತ್ರಿಗಳಲ್ಲಿಗೆ’ ಅಂತ ಹೇಳಿದ.

‘ಏನು ಔಷಧಿ ಬೇಕಿತ್ತಾ?’ ಕೇಳಿದರು.

ಸಂಜಯನಿಗಂತೂ ಈ ತರದ ಪ್ರಶ್ನೆ ಸರಿಕಾಣುತ್ತಿರಲಿಲ್ಲ. ಈ ಊರಲ್ಲಿ ಎಲ್ಲರಿಗೂ ಇನ್ನೊಬ್ಬರ ವೈಯಕ್ತಿಕ ವಿಷಯ ಬೇಕು. ಅಮೆರಿಕದಲ್ಲಂತೂ ಈ ತರಹ ಸಾಧ್ಯವೇ ಇಲ್ಲ. ಯಾರೂ ಇನ್ನೊಬ್ಬರ ವೈಯಕ್ತಿಕ ವಿಷಯಕ್ಕೆ ಇಳಿಯುವುದಿಲ್ಲ ಅದೂ ಅಪರಿಚಿತರ ವಿಷಯ. ಸಂಜಯ್ ಪೊರ್ಬುಗಳನ್ನು ನೋಡಿ ಅವರು ಕೇಳಿದ ಪ್ರಶ್ನೆಗೆ ಉತ್ತರ ಕೊಡದೆ ‘ಈ ಗುಡ್ಡ ಹೇಗೆ ದಾಟುವುದು ಅಂತ ಸ್ವಲ್ಪ ಹೇಳ್ತೀರಾ?’ ಅಂದ.

ಅದಕ್ಕೆ ಪೊರ್ಬುಗಳು ‘ಅದು ಸುಲಭ, ಆದ್ರೆ ನಿಮಗೆ ದಾರಿ ತಪ್ಪಬಹುದು. ಒಂದು ಮಾಡ್ತೇನೆ’ ಅಂತ ಹೇಳಿ ಅವರ ಹೆಂಡತಿ ಮೇರಿಯನ್ನು ಕರೆಮಾಡಿದರು. ‘ಮೇರಿ, ನೋಡು ಇಲ್ಲಿ ಇವರಿಗೆ ಸೀತಾಪುರಕ್ಕೆ ಹೋಗ್ಬೇಕಂತೆ ಅದೂ ಶಾಸ್ತ್ರಿಗಳಲ್ಲಿಗೆ ಸ್ವಲ್ಪ ಬಿಟ್ಟು ಬರ್ತಿಯಾ?’

ಮೇರಿ ಏನೋ ಕೆಲಸ ಮಾಡಿಕೊಂಡಿದ್ದವಳು ಹೊರಗೆ ಬಂದು ಸಂಜಯನನ್ನೂ ಪೊರ್ಬುಗಳನ್ನೂ ನೋಡಿ, ‘ಶಾಸ್ತ್ರಿಗಳಲ್ಲಿಗಾ?’ ಅಂತ ಕೇಳಿದವಳು ಬಹಳ ಸಂತೋಷ ದಿಂದ ಬಳಿಯಲ್ಲಿದ್ದ ಸೌತೆ ಬಳ್ಳಿಯಿಂದ ನಾಲ್ಕೈದು ಸೌತೆಕಾಯನ್ನು ಕೊಯ್ದು ಚೀಲಕ್ಕೆ ಹಾಕಿ ‘ಹೊರಡಿ’ ಎಂದಳು.

ಸಂಜಯನಿಗೆ ಮುಜುಗರ. ನನಗಾಗಿ ಈ ಹೆಂಗಸು ಎಲ್ಲ ಕೆಲಸ ಬಿಟ್ಟು ಹೊರಟಿದ್ದಾರೆ. ‘ನೀವು ಬರ್ಬೇಕಾಗಿಲ್ಲ ಬಿಡಿ.. ನನಗೆ ದಾರಿ ತೋರಿಸಿದರೆ ಸಾಕು’ ಅಂದ.

ಅದಕ್ಕೆ ಮೇರಿ ‘ದಾರಿಯೇ? ಈ ಕಾಡಲ್ಲಿ? ಈ ಊರಿನ ನಮಗೇ ದಾರಿ ತಪ್ಪುತ್ತದೆ. ಅದೂ ಅಲ್ಲದೆ ಕಾಡು ಪ್ರಾಣಿಗಳು ಬೇರೆ.. ದಾರಿ ಹೇಳಿದರೂ ನಿಮಗೆ ಹೋಗ್ಲಿಕ್ಕೆ ಸಾಧ್ಯ ಇಲ್ಲ. ನಾನು ಸೀತಮ್ಮನ ಮನೆಗೆ ಹೋಗದೆ ಬಹಳ ದಿನ ಆಗಿದೆ. ಅವರಿಗೆ ನಮ್ಮ ಸೌತೆಕಾಯಿ ಬಹಳ ಇಷ್ಟ. ಬನ್ನಿ ಹೊರಡುವ’ ಹೇಳಿದಳು.

ಸಂಜಯ್ ಮೇರಿಯ ಜೊತೆಗೆ ಹೊರಟ.

ನಡೆಯಲು ಶುರು ಆಗಿ ಸ್ವಲ್ಪ ಹೊತ್ತಿಗೇ ಕಾಡು ಪ್ರಾರಂಭವಾಯಿತು. ಗಿಡ ಪೊದರುಗಳ ನಡುವೆ ಸಂಜಯ್ ಮತ್ತು ಮೇರಿ ಹೋಗತೊಡಗಿದರು. ಮೇರಿಯ ಕೈಯಲ್ಲಿ ಒಂದು ಹರಿತವಾದ ಕತ್ತಿ. ಅದರಿಂದ ದಾರಿಗೆ ಅಡ್ಡಬಂದ ಗಿಡ ಪೊದರುಗಳನ್ನು ಬಿಡಿಸಿಕೊಳ್ಳುತ್ತ ಅವಳು ಮುಂದುವರೆದಳು. ಅವಳ ಹಿಂದೆ ಸಂಜಯ್. ಸಂಜಯನ ಹಿಂದೆ ಮೇರಿಯ ನಾಯಿ ಬರುತ್ತಿತ್ತು. ಸ್ವಲ್ಪ ದೂರ ಹೋದ ಮೇರಿ ಒಂದು ಕ್ಷಣ ನಿಂತು ಅವಳ ನಾಯಿಗೆ ಜೋರಾಗಿ ಕಿರುಚುತ್ತಾ ಬೈದು ಮನೆಗೆ ಹಿಂದೆ ಹೋಗಲು ಹೇಳಿದಳು. ನಾಯಿಯಂತೂ ಆ ಮಾತನ್ನು ಕೇಳದೆ ಅದರ ಒಡತಿಯ ಹಿಂದೆ ಹೊರಟಿತು. ಕೊನೆಗೆ ಮೇರಿ ನಿಂತು ನೆಲದಿಂದ ಸಣ್ಣ ಕಲ್ಲೊಂದು ಎತ್ತಿ ನಾಯಿಗೆ ಹೊಡೆಯುವ ಹಾಗೆ ನಟಿಸುತ್ತಾ ಜೋರಾಗಿ ಬಯ್ದಳು. ನಾಯಿಗೆ ಏನನಿಸಿತೋ.. ಒಂದು ಕ್ಷಣ ನಿಂತು ಹತ್ತಿರದ ಗಿಡಪೊದರುಗಳಿಗೆ ಮೂತ್ರ ಮಾಡಿ ನಂತರ ಹಿಂದೆ ತಿರುಗಿ ಮನೆಯ ಕಡೆಗೆ ಓಡಲು ಶುರು ಮಾಡಿತು. ಮೇರಿ ಸಂಜಯನ ಕಡೆಗೆ ತಿರುಗಿ ಈ ಕಾಡಲ್ಲಿ ಹುಲಿ ಇದೆ. ಅದು ನಾಯಿಯನ್ನು ಹಿಡಿಯುತ್ತದೆ. ಅದಕ್ಕೆ ಓಡಿಸಿದೆ ಅನ್ನುತ್ತಾ ಪೊದರುಗಳನ್ನು ಬಿಡಿಸುತ್ತಾ ಮುಂದೆ ನಡೆದಳು. ಸಂಜಯ್ ಹುಲಿಯ ವಿಷಯ ಕೇಳಿ ಬೆವರತೊಡಗಿದ. ಅವನು ಹಲವಾರು ಟ್ರೆಕ್ಕಿಂಗ್ ಮಾಡಿದವ. ಆದರೂ ಈ ತರಹದ ಕಾಡು ಗುಡ್ಡ ನೋಡಿರಲಿಲ್ಲ. ಸಂಜಯ್ ಅರ್ಧ ಗುಡ್ಡ ಹತ್ತಿದವನೇ ಬೆವರುತ್ತಾ ನಿಂತ. ಮೇರಿ ಹಿಂದೆ ತಿರುಗಿ ನಗುತ್ತಾ ‘ಏನು ಸರ್, ನಿಮ್ಮ ಬ್ಯಾಗ್ ಹಿಡ್ಕೊಳ್ಬೇಕಾ?’ ಅಂತ ಹೇಳಿದವಳೇ ಅವನ ಉತ್ತರಕ್ಕೂ ಕಾಯದೆ ಅವನ ಕೈಯಿಂದ ಬ್ಯಾಗ್ ಕಸಿದುಕೊಂಡಳು. ತನ್ನ ಕೈಯಲ್ಲಿದ್ದ ಸೌತೇಕಾಯನ್ನೂ ಬ್ಯಾಗನ್ನೂ ಒಂದೇ ಹೆಗಲಿಗೆ ಹಾಕಿ ತರತರನೇ ಗುಡ್ಡ ಹತ್ತಲು ಶುರುಮಾಡಿದಳು. ಸಂಜಯನಿಗೆ ಆಶ್ಚರ್ಯ ಮತ್ತು ನಾಚಿಕೆ ಆಯಿತು. ಆದರೂ ಮಾತಾಡದೆ ಮೇರಿಯ ಹಿಂದೆ ಬೇಗಬೇಗನೆ ಹೋಗಲು ಶುರುಮಾಡಿದ.

ಗುಡ್ಡದ ತುದಿಗೆ ತಲುಪಿದಾಗ ಗಿಡಮರಗಳು ವಿರಳವಾದವು. ಒಂದು ದೊಡ್ಡ ಕಲ್ಲು ಕಂಡಿತು. ಮೇರಿ ಅದರ ಮೇಲೆ ಹತ್ತಿದವಳೇ ಸಂಜಯನಿಗೆ ಅಲ್ಲಿ ಬರಲು ಹೇಳಿದಳು. ಅಲ್ಲಿಗೆ ಹೋದ ಸಂಜಯನಿಗೆ ಮೇರಿ ಕೆಳಗೆ ನೋಡಲು ಹೇಳಿದಳು. ಸಂಜಯ್ ನೋಡಿದವನೇ ‘ವ್ಹಾ’ ಅಂತ ಹೇಳಿದ. ಎಲ್ಲಿ ನೋಡಿದರಲ್ಲಿ ಹಸಿರು..ದಟ್ಟ ಕಾಡು.. ಹೊಲಗದ್ದೆ. ಇಡೀ ಜಾಗವೇ ಹಸಿರು ಸಮುದ್ರದ ಹಾಗೆ ಕಾಣುತ್ತಿತ್ತು. ಎಷ್ಟು ದೂರ ನೋಡಿದರೂ ಅಷ್ಟು ದೂರ ಹಸಿರು. ತಣ್ಣಗಿನ ಕಾಡಿನ ಗಾಳಿ ಬೀಸುತ್ತಿತ್ತು. ‘ಅದ್ಭುತ’ ಅಂದ ಸಂಜಯ್.

‘ನೋಡಿ ಇದೇ ಸೀತಾಪುರ. ಹೆಸರಿಗೆ ಇದು ‘ಪುರ’. ಆದರೆ ಇದು ಮರಗಳ ಪುರವೇ ಹೊರತು ಮನುಷ್ಯರದ್ದಲ್ಲ’ ಮೇರಿ ನಗುತ್ತ ಹೇಳಿದಳು. ‘ಇಲ್ಲಿ ಮರಗಿಡಗಳ ಪ್ರಾಣಿಗಳದ್ದೇ ಸಾಮ್ರಾಜ್ಯ. ಹುಲಿ, ಹಂದಿ, ನರಿ, ಕತ್ತೆ ಕಿರುಬ ಇದೆಲ್ಲಾ ಇಲ್ಲಿ ಸಾಮಾನ್ಯ. ಒಮ್ಮೊಮ್ಮೆ ಆನೆಗಳ ಹಿಂಡು ಈ ಕಡೆ ಬರುವುದೂ ಉಂಟು. ಕಾಡು ಅಂದರೆ ಸಾಮಾನ್ಯದ್ದಲ್ಲ. ಇಲ್ಲೇ ಸ್ವಲ್ಪ ಆ ಕಡೆ ಹೋದರೆ ಕಾಡು ದಟ್ಟವಾಗುತ್ತಾ ಹೋಗುತ್ತದೆ ನಡು ಮಧ್ಯಾಹ್ನ ಕೂಡ ಕಾಡಿನೊಳಗೆ ಕತ್ತಲೆ ಇರುತ್ತದೆ. ಈ ಕಾಡಿನೊಳಗೆ ಇಲ್ಲದ ಔಷಧ ಇಲ್ಲ. ಅದೆಲ್ಲಾ ಶಾಸ್ತ್ರಿಗಳಿಗೆ ಗೊತ್ತು. ಇಲ್ಲೇ ಅಡ್ಡ ದಾರಿಯಲ್ಲಿ ಕೆಳಗೆ ಇಳಿದರೆ ಸೀತಾಪುರ ಬರುತ್ತದೆ. ಅಲ್ಲಿ ಜನ ಗದ್ದೆ ತೋಟ ಮಾಡಿಕೊಂಡಿದ್ದಾರೆ’ ಅಂದಳು.

ಸಂಜಯ್ ಕೆಳಗೆ ನೋಡಿದ. ದೂರದಲ್ಲಿ ಗದ್ದೆಗಳೂ ಮನೆಗಳೂ ಸಣ್ಣದಾಗಿ ಕಾಣುತ್ತಿದ್ದವು.

‘ಶಾಸ್ತ್ರಿಗಳ ಮನೆ ಎಲ್ಲಿ?’ ಸಂಜಯ್ ಪ್ರಶ್ನಿಸಿದ.

‘ಅಬ್ಬಬ್ಬಾ, ಏನು ತರಾತುರಿ. ನೀವು ಪೇಟೆಯವರು ಹೀಗೆಯೇ ಇದ್ದಿರಬೇಕು. ಯಾವುದಕ್ಕೂ ತಾಳ್ಮೆ ಇಲ್ಲ’ ಎಂದು ಗೊಣಗುತ್ತ ಮೇರಿ ಸಂಜಯ್ ಸಮೀಪ ಬಂದು ದೂರಕ್ಕೆ ಕೈಮಾಡಿ ‘ನೋಡಿ, ಓ ಅಲ್ಲಿ ಒಂದು ಹಂಚಿನ ಮನೆ ಇದೆಯಲ್ಲಾ, ಅದು ಶಾಸ್ತ್ರಿಗಳ ಮನೆ. ಅದರಾಚೆ ಉದ್ದದ ಕಟ್ಟಡ ಕಾಣುತ್ತದೆ ನೋಡಿ ಅದು ಸೀತಾಪುರದ ಶಾಲೆ. ಈ ಕಡೆ ಈ ಗುಡ್ಡದ ಮೇಲೆ ಉದ್ದದ ಕಂಬ ಕಾಣ್ತಿದೆ ನೋಡಿ.. ಅದು ದೇವಸ್ಥಾನದ ಕೊಡಿಕಂಬ’ ಎನ್ನುತ್ತಾ ದೂರದಲ್ಲೇ ಸೀತಾಪುರವನ್ನು ಪರಿಚಯಿಸಲು ಶುರುಮಾಡಿದಳು.

‘ಇಲ್ಲಿ ಹೋಟೆಲ್ ಏನಾದ್ರೂ ಇದೆಯಾ’ ಸಂಜಯ್ ಕೇಳಿದ.

‘ಹೋಟೆಲ್? ಇಲ್ಲಿ ಒಂದೆರಡು ಗೂಡಂಗಡಿ ಬಿಟ್ಟರೆ ಬೇರೇನೂ ಇಲ್ಲ.. ನೋಡಿ... ಓ ಅಲ್ಲಿ ಒಂದು ಸಣ್ಣ ಗೂಡಂಗಡಿ ಇದೆ’ ಅಂದಳು.

ಸಂಜಯ್ ಕಣ್ಣುಗಳನ್ನು ದೊಡ್ಡದು ಮಾಡಿ ದೂರದಲ್ಲಿ ಕಾಣುವ ಕಟ್ಟಡಗಳನ್ನು ನೋಡತೊಡಗಿದ. ಅವನಿಗೆ ಅದೆಲ್ಲಾ ಒಂದೇ ತರಹದ ಕಟ್ಟಡಗಳ ಹಾಗೆ ಕಾಣಿಸತೊಡಗಿತು.

‘ಎಲ್ಲಾ ಒಂದೇ ತರಹ ಕಾಣುತ್ತಿದೆಯಲ್ಲಾ’ ಅಂದ ಸಂಜಯ್.

ಮೇರಿ ಮುಗುಳ್ನಗುತ್ತಾ ‘ನಮ್ಮ ಹಳ್ಳಿಗಳನ್ನು ನೋಡಲಿಕ್ಕೆ ನಿಮಗೆ ಬೇರೆಯೇ ಕಣ್ಣು ಬೇಕು’ ಅಂದಳು. ಸಂಜಯ್ ಗೊಂದಲಕ್ಕೊಳಗಾದದ್ದನ್ನು ನೋಡಿ ‘ಬಿಡಿ ಇದನ್ನು, ತಮಾಶೆ ಮಾಡಿದೆ. ನಾವು ಕೆಳಗೆ ಹೋಗುತ್ತೇವಲ್ಲಾ.. ಆಗ ಎಲ್ಲಾ ಗೊತ್ತಾಗುತ್ತದೆ’ ಅಂದಳು.

ಸಂಜಯ್ ಅವಳ ಕೈಯಿಂದ ಬ್ಯಾಗ್ ತೆಗೆದುಕೊಂಡು ಅದರಿಂದ ಅವನ ಸೆಲ್ ಫೋನ್ ತಗೆದು ಫೋಟೊ ತೆಗೆಯಲು ಶುರುಮಾಡಿದ. ಮೇರಿ ಅವನ ಫೋನ್ ನೋಡಿ ‘ಫೋನಾ? ಈಗಲೇ ಏನು ಮಾಡ್ಬೇಕೊ ಅದು ಮಾಡಿ... ಇಲ್ಲಿಂದ ಕೆಳಗೆ ಇಳಿದರೆ ನಿಮಗೆ ಫೋನು ಸಿಕ್ಕುವುದಿಲ್ಲ’ ಅಂದಳು.

ಸಂಜಯ್ ಒಂದು ಕ್ಷಣ ಮೇರಿಯ ಮುಖ ನೋಡಿದ. ‘ನಾನು ಇಡೀ ಭಾರತ ದಲ್ಲಿ ಮೊಬೈಲ್ ನೆಟ್ವರ್ಕ್ ಇದೆ ಅಂತ ಕೇಳಿದ್ದೆ.. ಸೀತಾಪುರದಲ್ಲಿ ಇಲ್ವಾ?’ ಕೇಳಿದ.

ಅದಕ್ಕೆ ಮೇರಿ ನಗುತ್ತ ‘ಸೀತಾಪುರ ನಿಮ್ಮ ಭಾರತದಲ್ಲೇ ಇಲ್ಲ. ಇಲ್ಲಿ ಫೋನ್ ನೆಟ್ವರ್ಕ್ ಇಲ್ಲ. ಟಿವಿ ಸಿಗ್ನಲ್ ಕೂಡ ಸರಿಯಾಗಿ ಸಿಕ್ಕುತ್ತಿಲ್ಲ. ರಸ್ತೆ ಇಲ್ಲ. ಪುಣ್ಯಕ್ಕೆ ಕರೆಂಟ್ ಇದೆ ಅಷ್ಟೇ’ ಅಂದಳು. ‘ಮಳೆಗಾಲದಲ್ಲಿ ಸೀತಾನದಿ ತುಂಬುತ್ತದೆ. ಕಾಡಿನಲ್ಲಿ ಹೋಗಿಬರಲು ಆಗುವುದಿಲ್ಲ. ಮಳೆಗಾಲದಲ್ಲಿ ಈ ಸೀತಾಪುರ ಒಂದು ದ್ವೀಪದ ಹಾಗೆ ಆಗುತ್ತದೆ’ ಅಂದಳು.

ಸಂಜಯನಿಗೆ ಗಾಬರಿ ಆಯಿತು. ಮಳೆಗಾಲಕ್ಕೆ ಇನ್ನೆಷ್ಟು ದಿನ ಇದೆ? ಅಂತ ಕೇಳಿದ. ಮೇರಿ ನಗುತ್ತ ‘ಗಾಬರಿಯಾಗಬೇಡಿ, ಇನ್ನೂ ಎರಡು ತಿಂಗಳು ಇದೆ’ ಎನ್ನುತ್ತಾ ‘ನಾವು ಕೆಳಗೆ ಹೋಗೋಣವೇ’ ಅಂದಳು.